# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 427
2) ಸದಸ್ಯರ ಹೆಸರು : ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು)
3) ಉತ್ತರಿಸಬೇಕಾದ ದಿನಾಂಕ : 13-08-2025
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಜಲಾಶಯಗಳಲ್ಲಿ ಮತ್ತು ಕೆರೆಗಳಲ್ಲಿ ಎಷ್ಟು ಮೀನುಮರಿಗಳನ್ನು ಬಿತ್ತನೆ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಜಲಾಶಯಗಳಲ್ಲಿ ಮತ್ತು ಕೆರೆಗಳಲ್ಲಿ ಮೀನುಮರಿಗಳನ್ನು ಬಿತ್ತನೆ ಮಾಡಲಾದ ಜಿಲ್ಲಾವಾರು ಮಾಹಿತಿಯನ್ನು <u>ಅನುಬಂಧ-1</u> ರಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಸರ್ಕಾರದಿಂದ ಮೀನುಗಾರರಿಗೆ ಇರುವ ಸವಲತ್ತುಗಳೇನು; (ವಿವರ ನೀಡುವುದು)</td><td>ಸರ್ಕಾರದಿಂದ ಮೀನುಗಾರರಿಗೆ ಇರುವ ಸವಲತ್ತುಗಳ ವಿವರಗಳನ್ನು <u>ಅನುಬಂಧ-2</u> ರಲ್ಲಿ ನೀಡಲಾಗಿದೆ.</td></tr>
<tr><td>ಇ)</td><td>ಕಳೆದ ಮೂರು ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಗೆ ಎಷ್ಟು ಮತ್ಸ್ಯ ಆಶ್ರಯ ಮನೆಗಳನ್ನು ಮಂಜೂರು ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಗೆ ಮತ್ಸ್ಯಾಶ್ರಯ ಮನೆಗಳನ್ನು ಮಂಜೂರು ಮಾಡಲಾದ ತಾಲ್ಲೂಕುವಾರು ವಿವರ ಕೆಳಗಿನಂತಿದೆ:-
<table>
<tr><th>ಕ್ರ ಸಂ.</th><th>ತಾಲ್ಲೂಕು / ವಿಧಾನ ಸಭಾ ಕ್ಷೇತ್ರ</th><th>2022-23</th><th>2023-24</th><th>2024-25</th></tr>
<tr><td>1)</td><td>ಶಿವಮೊಗ್ಗ ಗ್ರಾಮೀಣ</td><td>3</td><td rowspan="7">ಯಾವುದೇ ಮನೆಗಳು ಮಂಜೂರಾಗಿರುವುದಿಲ್ಲ</td><td>25</td></tr>
<tr><td>2)</td><td>ಶಿವಮೊಗ್ಗ ನಗರ</td><td>0</td><td>25</td></tr>
<tr><td>3)</td><td>ಭದ್ರಾವತಿ</td><td>5</td><td>25</td></tr>
<tr><td>4)</td><td>ಶಿಕಾರಿಪುರ</td><td>13</td><td>25</td></tr>
<tr><td>5)</td><td>ಸೊರಬ</td><td>38</td><td>25</td></tr>
<tr><td>6)</td><td>ಸಾಗರ</td><td>12</td><td>25</td></tr>
<tr><td>7)</td><td>ತೀರ್ಥಹಳ್ಳಿ</td><td>15</td><td>25</td></tr>
<tr><td></td><td>ಒಟ್ಟು</td><td>86</td><td>00</td><td>175</td></tr>
</table></td></tr>
<tr><td>ಈ)</td><td>ಕಳೆದ ಮೂರು ವರ್ಷಗಳಿಂದ ಶಿವಮೊಗ್ಗ ಜಿಲ್ಲೆಯ ಮೀನುಗಾರರಿಗೆ ನೀಡಿದ ಸೌಲಭ್ಯಗಳಾವುವು; (ತಾಲ್ಲೂಕುವಾರು ವಿವರ ನೀಡುವುದು)</td><td>ಕಳೆದ ಮೂರು ವರ್ಷಗಳಿಂದ ಶಿವಮೊಗ್ಗ ಜಿಲ್ಲೆಯ ಮೀನುಗಾರರಿಗೆ ನೀಡಲಾಗುತ್ತಿರುವ ಸೌಲಭ್ಯಗಳ ತಾಲ್ಲೂಕುವಾರು ವಿವರಗಳನ್ನು <u>ಅನುಬಂಧ-3</u> ರಲ್ಲಿ ನೀಡಲಾಗಿದೆ.</td></tr>
<tr><td>ಉ)</td><td>ಶಿವಮೊಗ್ಗ ಜಿಲ್ಲೆಯಲ್ಲಿ ನೋಂದಣಿಯಾದ ಮೀನುಗಾರರ ಮತ್ತು ನೋಂದಣಿಯಾಗದೆ ಇರುವ ಮೀನುಗಾರರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td><td>ಶಿವಮೊಗ್ಗ ಜಿಲ್ಲೆಯಲ್ಲಿ ನೋಂದಣಿಯಾದ ಮೀನುಗಾರರ ಮತ್ತು ನೋಂದಣಿಯಾಗದೆ ಇರುವ ಮೀನುಗಾರರ ತಾಲ್ಲೂಕುವಾರು ವಿವರಗಳನ್ನು <u>ಅನುಬಂಧ-4</u> ರಲ್ಲಿ ನೀಡಲಾಗಿದೆ.</td></tr>
<tr><td>ಊ</td><td>ಈ ಜಿಲ್ಲೆಯಲ್ಲಿ ಎಷ್ಟು ಮೀನುಗಾರರ ಸಹಕಾರ ಸಂಘಗಳಿವೆ? (ತಾಲ್ಲೂಕುವಾರು ವಿವರ ನೀಡುವುದು)</td><td>ಶಿವಮೊಗ್ಗ ಜಿಲ್ಲೆಯಲ್ಲಿರುವ ಮೀನುಗಾರರ ಸಹಕಾರ ಸಂಘಗಳ ತಾಲ್ಲೂಕುವಾರು ವಿವರಗಳನ್ನು <u>ಅನುಬಂಧ-5</u> ರಲ್ಲಿ ನೀಡಲಾಗಿದೆ.</td></tr>
</table>

ಸಂಖ್ಯೆ: ಪಸಂಮೀ ಇ-127 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಬಿಲ್ಕಿಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ [illegible]

## ಅನುಬಂಧ-1

| ಕ್ರ.ಸಂ | ಜಿಲ್ಲೆಯ ಹೆಸರು | ಕೆರೆಗಳಿಗೆ ಬಿತ್ತನೆ ಮಾಡಿದ ಮೀನುಮರಿಗಳ ಸಂಖ್ಯೆ (ಲಕ್ಷಗಳಲ್ಲಿ) | | | ಜಲಾಶಯಗಳಿಗೆ ಬಿತ್ತನೆ ಮಾಡಿದ ಮೀನುಮರಿಗಳ ಸಂಖ್ಯೆ (ಲಕ್ಷಗಳಲ್ಲಿ) | | |
|---|---|---|---|---|---|---|---|
| | | 2022-23 | 2023-24 | 2024-25 | 2022-23 | 2023-24 | 2024-25 |
| 1 | ಬೆಂಗಳೂರು (ಗ್ರಾ) | 148.41 | 49.19 | 63.16 | 0.00 | 0.00 | 0.00 |
| 2 | ಬೆಂಗಳೂರು (ನಗರ) | 77.75 | 83.21 | 83.00 | 10.08 | 5.00 | 7.00 |
| 3 | ಚಿಕ್ಕಬಳ್ಳಾಪುರ | 94.22 | 102.12 | 31.20 | 0.00 | 0.00 | 0.00 |
| 4 | ಕೋಲಾರ | 105.72 | 69.71 | 97.72 | 2.80 | 0.00 | 0.00 |
| 5 | ರಾಮನಗರ (ಬೆಂ.ದ.ಜಿ) | 50.49 | 56.48 | 57.89 | 4.00 | 3.00 | 5.84 |
| 6 | ತುಮಕೂರು | 304.67 | 282.26 | 224.18 | 1.80 | 2.06 | 4.55 |
| 7 | ಶಿವಮೊಗ್ಗ | 266.32 | 225.81 | 304.16 | 118.63 | 128.37 | 96.78 |
| 8 | ಚಿಕ್ಕಮಗಳೂರು | 56.41 | 36.93 | 126.95 | 23.19 | 40.00 | 34.00 |
| 9 | ಚಿತ್ರದುರ್ಗ | 147.06 | 92.55 | 148.70 | 17.03 | 20.68 | 8.80 |
| 10 | ದಾವಣಗೆರೆ | 160.75 | 107.66 | 129.14 | 8.55 | 10.00 | 6.00 |
| 11 | ಬೆಳಗಾವಿ | 108.32 | 38.00 | 0.00 | 89.15 | 72.10 | 86.20 |
| 12 | ಬಿಜಾಪುರ | 18.01 | 60.00 | 71.00 | 207.05 | 0.00 | 0.00 |
| 13 | ಧಾರವಾಡ | 102.00 | 77.92 | 75.39 | 2.60 | 4.25 | 5.25 |
| 14 | ಗದಗ | 24.50 | 29.55 | 28.31 | 0.00 | 0.00 | 0.00 |
| 15 | ಹಾವೇರಿ | 118.06 | 68.10 | 127.10 | 2.10 | 1.20 | 2.40 |
| 16 | ಬಾಗಲಕೋಟೆ | 25.57 | 21.25 | 12.50 | 161.54 | 43.70 | 4.26 |
| 17 | ಮೈಸೂರು | 113.23 | 106.91 | 132.03 | 56.00 | 63.50 | 62.00 |
| 18 | ಹಾಸನ | 93.15 | 138.56 | 178.02 | 30.58 | 10.56 | 3.14 |
| 19 | ಕೊಡಗು | 0.34 | 1.12 | 2.34 | 7.80 | 29.14 | 34.75 |
| 20 | ಮಂಡ್ಯ | 244.22 | 285.46 | 312.00 | 17.49 | 17.20 | 22.85 |
| 21 | ಚಾಮರಾಜನಗರ | 50.79 | 40.72 | 69.33 | 9.00 | 2.50 | 2.75 |
| 22 | ಬಳ್ಳಾರಿ | 55.00 | 36.00 | 60.00 | 6.00 | 3.60 | 1.75 |
| 23 | ಬೀದರ್ | 46.00 | 50.00 | 50.00 | 6.00 | 3.00 | 5.90 |
| 24 | ರಾಯಚೂರು | 98.60 | 112.50 | 125.80 | 6.80 | 6.90 | 9.40 |
| 25 | ಗುಲ್ಬರ್ಗಾ | 59.10 | 61.10 | 69.10 | 35.90 | 46.70 | 30.00 |
| 26 | ಯಾದಗಿರಿ | 55.05 | 61.88 | 59.20 | 6.00 | 2.50 | 4.50 |
| 27 | ಕೊಪ್ಪಳ | 68.75 | 70.42 | 71.90 | 5.70 | 5.09 | 4.05 |
| 28 | ವಿಜಯನಗರ | 38.62 | 42.80 | 55.56 | 15.00 | 0.00 | 0.00 |
| 29 | ಉತ್ತರ ಕನ್ನಡ | 43.62 | 32.75 | 62.92 | 3.80 | 0.00 | 0.00 |
| 30 | ದಕ್ಷಿಣ ಕನ್ನಡ | 1.90 | 0.00 | 0.00 | 0.16 | 0.42 | 0.41 |
| 31 | ಉಡುಪಿ | 5.57 | 3.30 | 13.95 | 0.00 | 0.00 | 0.00 |
| | **ಒಟ್ಟು** | **2782.20** | **2444.26** | **2842.55** | **854.75** | **521.47** | **442.57** |

ಮೀನುಗಾರಿಕೆ ನಿರ್ದೇಶಕರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರು-ತಿಲ್ಲದ ಪ್ರಶ್ನೆ ಸಂಖ್ಯೆ 427 (279) ಕ್ಕೆ

## ಅನುಬಂಧ-2

## ಮೀನುಗಾರಿಕೆ ಇಲಾಖೆಯಲ್ಲಿ ಮೀನುಗಾರರಿಗೆ ಇರುವ ಸವಲತ್ತುಗಳ ವಿವರ

### 1.ಸಮಗ್ರಮೀನುಗಾರಿಕೆ ಅಭಿವೃದ್ಧಿಕಾರ್ಯಕ್ರಮಗಳು :

ಹಿಂದಿನ ಸಾಲಿನ ವರೆಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆಗಳಡಿ ಅನುಷ್ಠಾನಗೊಳಿಸಲಾಗುತ್ತಿದ್ದ 5 ಯೋಜನೆ ಗಳನ್ನು 2023-24ನೇ ಸಾಲಿನಿಂದ ಒಂದೇ ಲೆಕ್ಕ ಶೀರ್ಷಿಕೆಯಡಿ (2405-00-101-0-03) ವಿಲೀನಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

### 1.1 ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ

a..ಸರ್ಕಾರ ಸ್ವಾಮ್ಯದ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಿಂದ ಖರೀದಿಸಿದ ಎಲ್ಲಾ ತಳಿಗಳ ಮೀನು ಮರಿ ಬೆಲೆಯ ಶೇ.50 ರಷ್ಟು ಅಂದರೆ ವ್ಯಕ್ತಿಗತ ಗರಿಷ್ಠ ರೂ.5,000/- ಹಾಗೂ ಮೀನುಗಾರರ ಸಂಘಗಳಿಗೆ ಗರಿಷ್ಠ ರೂ.20,000/-ಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು. ಮೀನುಗಾರಿಕೆ ಇಲಾಖೆಯಿಂದ ನೋಂದಾಯಿಸಿಕೊಂಡು ಸ್ವಂತ ಕೊಳಗಳಲ್ಲಿ ಮೀನುಮರಿ ಪಾಲನೆ ಕೈಗೊಳ್ಳಲು ಮೀನು ಕೃಷಿಕರಿಗೆ ಪ್ರತಿ ಹೆಕ್ಟೇರ್ ಜಲ ವಿಸ್ತೀರ್ಣಕ್ಕೆ 50 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಖರೀದಿಸಲು ಶೇ. 50 ರಷ್ಟು ಗರಿಷ್ಠ ರೂ.25,000 ಗಳ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

c. ರಾಜ್ಯದಲ್ಲಿ ಲಭ್ಯವಿರುವ ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸಿಗಡಿ ಮತ್ತು ಹಿನ್ನೀರು ಮೀನು ಕೃಷಿಯನ್ನು ಪ್ರೋತ್ಸಾಹಿಸಲು ಪ್ರತಿ ಹೆಕ್ಟೇರ್ ವಿಸ್ತೀರ್ಣಕ್ಕೆ 1 ಲಕ್ಷ ರೂ.ಗಳ ಘಟಕ ವೆಚ್ಚಕ್ಕೆ ಶೇ.50 ರಷ್ಟು ಸಹಾಯಧನ ನೀಡಲಾಗುವುದು.

d. ಕೆರೆ/ಜಲಾಶಯದ ಅಂಚಿನಲ್ಲಿ ನಿರ್ಮಿಸಿರುವ ಮೀನುಮರಿ ಪಾಲನಾ ಕೊಳಗಳಲ್ಲಿ ಮೀನುಮರಿಗಳನ್ನು ಸಾಕಾಣಿಕೆ ಮಾಡಲು ಪ್ರತಿ ಹೆಕ್ಟರ್ ಗೆ ರೂ.2.50 ಲಕ್ಷ ಸಹಾಯಧನ ನೀಡಲಾಗುವುದು.

e. ಮೀನಿನಮರಿ ಉತ್ಪಾದನೆಯನ್ನು ಹೆಚ್ಚಿಸುವ ಒಂದು ತಂತ್ರವೆಂದರೆ ಮೀನು ಉತ್ಪಾದನೆ/ಸಾಕಣೆ ಕೇಂದ್ರಗಳಲ್ಲಿ ಸೌಲಭ್ಯಗಳ ಉನ್ನತೀಕರಣ (ಆಧುನೀಕರಣ) ಮೂಲಕ ಅಸ್ತಿತ್ವದಲ್ಲಿರುವ ಮೀನು ಸಾಕಣೆ ಸಾಮರ್ಥ್ಯದ ಬಳಕೆಯನ್ನು ಹೆಚ್ಚಿಸುವುದು. ಈ ನಿಟ್ಟಿನಲ್ಲಿ ಮೀನುಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣವನ್ನು ಇದೇ ಲೆಕ್ಕ ಶೀರ್ಷಿಕೆಯಡಿ ಕೈಗೊಳ್ಳಲಾಗುತ್ತಿದೆ.

### 1.2. ಮೀನುಗಾರಿಕೆ ಸಲಕರಣೆ ಕಿಟ್ಟುಗಳವಿತರಣೆ

a. ಕರಾವಳಿ ಮತ್ತು ಒಳನಾಡಿನಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ ಮೀನು ಹಿಡುವಳಿಗೆ ಬೇಕಾದ ಬಲೆ, ಮತ್ತು ಪೂರಕ ಸಾಮಗ್ರಿಗಳನ್ನು ಕಿಟ್ಟು ರೂಪದಲ್ಲಿ ಖರೀದಿಸಲು ಅವಕಾಶ ಮಾಡಲಾಗಿದೆ. ಈ ಯೋಜನೆಯ ಘಟಕ ವೆಚ್ಚ ಗರಿಷ್ಠ ರೂ.10,000 ಗಳಾಗಿದ್ದು, ಶೇ.100 ರಷ್ಟು ಸಹಾಯಧನ ನೀಡಲು ಅವಕಾಶ ಮಾಡಲಾಗಿದೆ.

b. ರಾಜ್ಯದ ಎಲ್ಲಾ ಒಳನಾಡು ಜಿಲ್ಲೆಗಳ ಕೆರೆ, ಜಲಾಶಯ ಹಾಗೂ ನದಿಭಾಗಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ ಸದರಿ ಯೋಜನೆಯಡಿ ಒಂದು ಫೈಬರ್ ಗ್ಲಾಸ್ ಹರಿಗೋಲು ಹಾಗೂ ಎರಡು ಹುಟ್ಟುಗಳನ್ನು ಉಚಿತವಾಗಿ ನೀಡಲು ಅವಕಾಶ ಮಾಡಲಾಗಿದೆ. ಇದರ ಘಟಕ ವೆಚ್ಚ ರೂ.10,000/-ಗಳಾಗಿದ್ದು ಶೇ.100 ರಷ್ಟು ಸಹಾಯಧನ ನೀಡಲಾಗುವುದು.

### 1.3 ಜಲಾಶಯಗಳಲ್ಲಿ ಮೀನು ಮರಿ ಬಿತ್ತನೆ

ರಾಜ್ಯದ ಆಯ್ದ ಜಲಾಶಯಗಳಲ್ಲಿ ಬಿತ್ತನೆ ಮೀನುಮರಿ ದಾಸ್ತಾನು ಮಾಡುವ ಮೂಲಕ ಮೀನುಗಾರಿಕೆ ಅಭಿವೃದ್ಧಿ ಕೈಗೊಳ್ಳುವುದು. ಅಗತ್ಯವಾದ ಬಿತ್ತನೆ ಮೀನುಮರಿಗಳನ್ನು ನೊಂದಾಯಿತ ಮೀನುಮರಿ ಸಾಕಾಣಿಕೆದಾರರಿಂದ ಸರ್ಕಾರವು ನಿಗದಿಪಡಿಸಿದ ದರದಲ್ಲಿ ಖರೀದಿಸಲಾಗುತ್ತಿದೆ.

### 1.4 ಮಂಜುಗಡ್ಡೆ ಸ್ಥಾವರ ಉಪಯೋಗಿಸುವ ವಿದ್ಯುತ್ ಮೇಲೆ ಸಹಾಯಧನ

ಈ ಯೋಜನೆಯಡಿ ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುತ್ ಪ್ರತಿ ಯೂನಿಟ್‌ಗೆ ರೂ.1.75 ರಂತೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ಘಟಕಕ್ಕೆ ವಾರ್ಷಿಕ ಗರಿಷ್ಠ ರೂ.3.50 ಲಕ್ಷ ಸಹಾಯಧನ ನೀಡಲಾಗುವುದು.

### 1.5 ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು

ಮೀನುಗಾರರು ಮೀನುಗಾರಿಕೆ ಚಟುವಟಿಕೆಗಳಿಗೆ ವಾಣಿಜ್ಯ ಬ್ಯಾಂಕುಗಳಿಂದ ಅಲ್ಪಾವಧಿ ಸಾಲ ತೆಗೆದುಕೊಂಡು ಕೈಗೊಳ್ಳಲು ಅನುಕೂಲವಾಗುವಂತೆ ವ್ಯತ್ಯಾಸದ ಬಡ್ಡಿಯನ್ನು ತುಂಬಿಕೊಡಲು ಈ ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ. ಮೀನುಗಾರರು ರೂ.50,000 ಗಳವರೆಗೆ ಸಾಲ ಪಡೆಯಲು ಅವಕಾಶವಿರುತ್ತದೆ.

ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ 50,000 ರೂ.ಗಳ ವರೆಗೆ ಶೇ.2ರ ಬಡ್ಡಿ ದರದಲ್ಲಿ ವಾಣಿಜ್ಯ /ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ನೀಡುತ್ತಿರುವ ಸಾಲವನ್ನು 2018-19ನೇ ಸಾಲಿನಿಂದ ಶೂನ್ಯ ಬಡ್ಡಿ ದರದಲ್ಲಿ ನೀಡಲಾಗುತ್ತಿದೆ. 2023-24ನೇ ಸಾಲಿನಿಂದ ಸದರಿ ಯೋಜನೆಯಡಿ ಸಾಲದ ಮಿತಿಯನ್ನು ರೂ.50,000/-ಗಳಿಂದ ರೂ.3,00,000/- ಗಳವರೆಗೆ ಹೆಚ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

## 2. PMMSY-ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆ (ಕೇಂದ್ರ ಪುರಸ್ಕೃತ ಯೋಜನೆ)

ಮೀನುಗಾರಿಕೆಯ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಯೊಜನೆಯಡಿ ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ, ಅಲಂಕಾರಿಕಾ ಮತ್ತು ಮನೊರಂಜನೆ ಮೀನುಗಾರಿಕೆ ಅಭಿವೃದ್ಧಿ, ನೂತನ ತಂತ್ರಜ್ಞಾನ ಅಳವಡಿಕೆ, ಹಿಡುವಳಿ ನಂತರದ ಶೀತಲ ಸರಪಳಿ ಮೂಲಸೌಕರ್ಯ, ಮೀನು ಆಹಾರ ತಯಾರಿಕಾ ಘಟಕ, ಮೀನು ಮಾರುಕಟ್ಟೆಗಳು ಮತ್ತು ಮಾರಾಟ ಮೂಲಸೌಕರ್ಯಗಳಿಗೆ ಸಹಾಯಧನ ನೀಡಲಾಗುತ್ತಿದೆ.

ಸದರಿ ಯೋಜನೆಯಡಿ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇಕಡ.40 ರಷ್ಟು ಸಹಾಯಧನ ಹಾಗೂ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇಕಡ. 60 ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ.

3. **ಅನುಸೂಚಿತ ಜಾತಿಗಳ ಉಪಯೋಜನೆ ಮತ್ತುಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿಬಳಕೆಯಾಗದೆ ಇರುವ ಮೊತ್ತ**

ಅನುಸೂಚಿತ ಜಾತಿ ಮತ್ತು ಪಂಗಡಕ್ಕೆ ಸೇರಿದ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆ ಕಿಟ್ಟ ಮತ್ತು ಫೈಬರ್ ಗ್ಲಾಸ್ ಹರಿಗೋಲು ವಿತರಣೆಗೆ ಅವಕಾಶ ಮಾಡಲಾಗುತ್ತಿದೆ.

4. **ಸಂಕಷ್ಟ ಪರಿಹಾರ ನಿಧಿಗೆ ಅಂಶದಾನಗಳು :**

**ಮರಣ ಪ್ರಕರಣ**: ಮೀನುಗಾರಿಕೆಯಲ್ಲಿ ಮತ್ತು ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವಾಗ ಮರಣಹೊಂದಿದ ಪ್ರಕರಣಗಳಿಗೆ ಹಾಗೂ ಮೀನುಗಾರಿಕೆಯಲ್ಲಿ ತೊಡಗಿದಾಗ ಅನಾರೋಗ್ಯದಿಂದ ಮೃತಪಟ್ಟ ಪ್ರಕರಣಗಳಿಗೆ ರೂ.10.00 ಲಕ್ಷ ಪರಿಹಾರ ನೀಡಲಾಗುವುದು.

**ಅಂಗವಿಕಲತೆ**: ಮೀನುಗಾರಿಕೆಯಲ್ಲಿ ತೊಡಗಿರುವಾಗ ಮತ್ತು ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿ ಮೀನುಗಾರರು ಶಾಶ್ವತ ಅಂಗವಿಕಲರಾದಲ್ಲಿ ರೂ.4.00 ಲಕ್ಷ ಹಾಗೂ ಭಾಗಶ: ಅಂಗವಿಕಲರಾದಲ್ಲಿ ರೂ.2.00 ಲಕ್ಷ ಪರಿಹಾರ ನೀಡಲಾಗುವುದು.

**ವೈದ್ಯಕೀಯ ವೆಚ್ಚ**: ಮೀನುಗಾರಿಕೆಯಲ್ಲಿ ಅಥವಾ ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿ ವೈದ್ಯಕೀಯ ಶುಶ್ರೂಷೆಗಾಗಿ ಮಾಡಿತ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಟ ರೂ.3.00 ಲಕ್ಷಗಳ ಮಿತಿಗೊಳಪಟ್ಟು ಪರಿಹಾರ ನೀಡಲಾಗುವುದು.

**ದೋಣಿ/ಬಲೆ/ಮೀನುಗಾರಿಕೆ ಸಲಕರಣೆಗಳ ಸ್ವತ್ತು ಹಾನಿ**: ಪ್ರಾಕೃತಿಕ ವಿಕೋಪದಿಂದಾದ ನಾಡದೋಣಿ/ಮೋಟರೀಕೃತ/ಯಾಂತ್ರೀಕೃತ ದೋಣಿಗಳ ಹಾನಿಗೆ ಹಾಗೂ ಬಲೆ ಇನ್ನಿತರ ಸ್ವತ್ತು ಹಾನಿಗೆ ಅವುಗಳ ಖರೀದಿ/ದುರಸ್ತಿ ಮೌಲ್ಯದ ಶೇ.50 ರಷ್ಟು ಮೌಲ್ಯವನ್ನು ಅಥವಾ ಗರಿಷ್ಟ ರೂ.10.00 ಲಕ್ಷಗಳಿಗೆ ಒಳಪಟ್ಟು ಪರಿಹಾರವಾಗಿ ನೀಡಲಾಗುವುದು.

5. **ಸಾಂಪ್ರದಾಯಕ ದೋಣಿಗಳಿಗೆ ಸೀಮೆಎಣ್ಣೆ ಸರಬರಾಜು:**

ಸಾಂಪ್ರದಾಯಿಕ ದೋಣಿಗಳಿಗೆ ಪಡಿತರ ದರದಲ್ಲಿ 300 ಲೀಟರ್ ಸೀಮೆಎಣ್ಣೆಯನ್ನು ಸರಬರಾಜು ಮಾಡಲು ಅವಕಾಶ ಕಲ್ಪಿಸಲಾಗಿದೆ. ಕರಾವಳಿಯ 3 ಜಿಲ್ಲೆಗಳ ನಾಡದೋಣಿ ಮೀನುಗಾರರಿಗೆ ರೂ.35/- ರಿಯಾಯತಿ ದರದಲ್ಲಿ ಕೈಗಾರಿಕಾ ಸೀಮೆಎಣ್ಣೆಯನ್ನು ನಿರಂತರವಾಗಿ ಪೂರೈಸಲು ಕ್ರಮ ಕೈಗೊಳ್ಳಲಾಗಿದೆ.

6. **ಮೀನುಗಾರಿಕೆ ದೋಣಿಗಳಿಗೆ ಡೀಸಲ್ ಮಾರಾಟ ತೆರಿಗೆ ಮರುಪಾವತಿ**

ಕರಾವಳಿಯ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ವಾರ್ಷಿಕ 2.00 ಲಕ್ಷ ಕಿ.ಮೀ. ಕರರಹಿತ ಡೀಸೆಲ್ ಅನ್ನು ಡೆಲಿವರಿ ಪಾಯಿಂಟ್ ನಲ್ಲಿ ವಿತರಿಸಲಾಗುತ್ತಿದೆ.

7. **ಮತ್ಸ್ಯಾಶ್ರಯ ಯೋಜನೆ:**

ರಾಜ್ಯ ಸರ್ಕಾರವು 2006-07ನೇ ಸಾಲಿನಿಂದ "ಮತ್ಸ್ಯಾಶ್ರಯ ಯೋಜನೆ"ಯನ್ನು ಪ್ರಾರಂಭಿಸಿದ್ದು, ಇದರ ಅಡಿಯಲ್ಲಿ ವಸತಿ ರಹಿತ ಮೀನುಗಾರರು ಅಥವಾ ವಾಸಿಸಲು ಯೋಗ್ಯ ಮನೆ ಇಲ್ಲದ ಮೀನುಗಾರರಿಗೆ ಪ್ರತಿ ವರ್ಷ ಅನುದಾನ ಲಭ್ಯತೆಯ ಆಧಾರದ ಮೇಲೆ ಮನೆಗಳನ್ನು ಹಂಚಿಕೆ ಮಾಡಲಾಗುತ್ತದೆ.

"2024-25 ನೇ ಸಾಲಿನಲ್ಲಿ 10,000 ವಸತಿ ರಹಿತ ಮೀನುಗಾರರಿಗೆ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಡಿಯಲ್ಲಿ ಮನೆಗಳನ್ನು ನಿರ್ಮಿಸಲು ಸಹಾಯಧನ ನೀಡಲಾಗುವುದು" ಎಂದು ಪ್ರಸ್ತುತ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದೆ.

8. **ಮೀನುಗಾರರ ಕಲ್ಯಾಣ ಯೋಜನೆಗಳು (ಕೇಂದ್ರ ಪುರಸ್ಕೃತ ಯೋಜನೆ)**

**ಅ) ಕಡಲ ಮೀನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆ**

ಉಳಿತಾಯ ಹಾಗೂ ಪರಿಹಾರ ಯೋಜನೆಯಡಿ ಕರಾವಳಿ ಮೀನುಗಾರರು ಮೀನುಗಾರಿಕೆ ಅವಧಿಯಲ್ಲಿ ಉಳಿತಾಯ ಮಾಡಿದ ರೂ. 1,500/- ಮೊತ್ತಕ್ಕೆ ಕೇಂದ್ರ ಸರ್ಕಾರ ರೂ.1500/- ಮತ್ತು ರಾಜ್ಯ ಸರ್ಕಾರ ರೂ.1500/- ಸೇರಿಸಿ ಹೀಗೆ ಒಟ್ಟು ರೂ. 4500/- ಗಳನ್ನು ಮೀನುಗಾರಿಕೆ ಇಲ್ಲದ 2 ತಿಂಗಳುಗಳಲ್ಲಿ ಮೀನುಗಾರರಿಗೆ ನೀಡಲಾಗುವುದು.

"ಮತ್ಸ್ಯ ಆಶಾಕಿರಣ ಯೋಜನೆಯಡಿ ಮೀನುಗಾರಿಕೆ ನಿಷೇಧದ ಅವಧಿಯಲ್ಲಿ ಕರಾವಳಿಯ ಮೀನುಗಾರರಿಗೆ ನೀಡುತ್ತಿರುವ ಪರಿಹಾರ ಮೊತ್ತದ ರಾಜ್ಯದ ಪಾಲನ್ನು 1,500 ರೂ. ಗಳಿಂದ 3,000 ರೂ. ಗಳಿಗೆ ಹೆಚ್ಚಿಸಲಾಗುವುದು" ಎಂದು ಪ್ರಸ್ತುತ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದ್ದು ಹೆಚ್ಚುವರಿಯಾಗಿ ರೂ.1,500/- ನ್ನು ಪ್ರತಿ ಮೀನುಗಾರರಿಗೆ ನೀಡಲಾಗುವುದು.

**ಆ) ಸಾಮೂಹಿಕ ವಿಮಾ ಯೋಜನೆ:**

ರಾಜ್ಯದ 80,099 ಮೀನುಗಾರರಿಗೆ ಗುಂಪು ವಿಮಾ ಸೌಲಭ್ಯ ಒದಗಿಸಲು ರಾಜ್ಯದ ವಿಮಾ ಕಂತನ್ನು ಪಾವತಿಸಲು ಅನುದಾನ ಒದಗಿಸಲಾಗಿದೆ. ಈ ಯೋಜನೆಯಡಿ ವಿಮಾ ಸೌಲಭ್ಯವನ್ನು ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಅವಲಂಬಿತರಿಗೆ ಹಾಗೂ ಶಾಶ್ವತ ಅಂಗವಿಕಲರಾದ ಮೀನುಗಾರರಿಗೆ ರೂ.5,00,000/- ಗಳ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.1,00,000 ಗಳ ಪರಿಹಾರ ನೀಡಲಾಗುವುದು. ವಿಮಾ ಕಂತಿನ ಹಣ ಪ್ರತಿ ವರ್ಷ ಹೈದರಾಬಾದ್‌ನಲ್ಲಿರುವ ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲಾಗುವುದು.

9. **ಮೀನುಗಾರಿಕೆ ಬಂದರುಗಳ ನಿರ್ಮಾಣ (ಕೇಂದ್ರ ಪುರಸ್ಕೃತ ಯೋಜನೆ)**

ಮಂಜೂರಾದ ಮೀನುಗಾರಿಕೆ ಬಂದರುಗಳ ಕಾಮಗಾರಿ ಮುಂದುವರಿಕೆಗೆ ಹಾಗೂ ಹೊಸ ಯೋಜನೆಗಳ ಕೈಗೊಳ್ಳಲು ಅವಕಾಶ ಮಾಡಲಾಗಿದೆ. ಪರಿಷ್ಕೃತ ಮಾರ್ಗಸೂಚಿಗಳ ಪ್ರಕಾರ ಕೇಂದ್ರ ಸರ್ಕಾರವು ಪ್ರತಿಶತ 50ರಷ್ಟು ಮತ್ತು ರಾಜ್ಯ ಸರ್ಕಾರವು ಪ್ರತಿಶತ 50ರಷ್ಟನ್ನು ಭರಿಸುತ್ತದೆ. ಈಗಾಗಲೇ ಮಂಜೂರಾದ ಯೋಜನೆಗಳು 75:25 ಅನುಪಾತದಲ್ಲಿಯೇ ಮುಂದುವರೆಯುತ್ತದೆ.

-5

10. **ಮೀನುಗಾರಿಕೆ ಜೆಟ್ಟಿ ಮತ್ತು ಇಳಿದಾಣಗಳ ನಿರ್ಮಾಣ ಮತ್ತು ನವೀಕರಣ**

ಮೀನುಗಾರಿಕೆ ಇಳಿದಾಣ ಕೇಂದ್ರಗಳ ನಿರ್ಮಾಣ ಹಾಗೂ ನವೀಕರಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಲೆಕ್ಕ ಶೀರ್ಷಿಕೆಯಡಿ ಪ್ರಗತಿಯಲ್ಲಿರುವ ಕೊಡೇರಿ ಮೀನುಗಾರಿಕೆ ಬಂದರಿನ ಹಾಗೂ ತೆಂಗಿನಗುಂಡಿ ಅಳ್ವೆಕೋಡಿ ಮೀನುಗಾರಿಕೆ ತಂಗುದಾಣದ ಕಾಮಗಾರಿಗಳನ್ನು ಮುಂದುವರಿಸಲು ಹಾಗೂ ಮರವಂತೆ, ಶಿರೂರು-ಅಳ್ವೆಗದ್ದೆ ಮತ್ತು ಕುಂದಾಪುರ ಕೋಡಿಯಲ್ಲಿ ಬಂದರು ಮತ್ತು ತಡೆಗೋಡೆಗಳ ಕಾಮಗಾರಿಗಳನ್ನು ಪ್ರಾರಂಭಿಸಲು ಹಾಗೂ ಭಟ್ಕಳ ಮತ್ತು ಕಾರವಾರ ಮೀನುಗಾರಿಕೆ ಬಂದರುಗಳಲ್ಲಿಯ ಧಕ್ಕೆಗಳನ್ನು ವಿಸ್ತರಿಸಲು ಅನುದಾನ ನೀಡಲಾಗಿದೆ. ಆಮದಳ್ಳಿ ಮೀನುಗಾರಿಕೆ ಕಾಮಗಾರಿಗಳನ್ನು ಕೇಂದ್ರ ಸರ್ಕಾರದ ಶೇ.75 ರಷ್ಟು ನೆರವಿನೊಂದಿಗೆ ಕೈಗೊಳ್ಳಲಾಗುವುದು.

11. **ಮೀನುಗಾರಿಕೆ ಕೊಂಡಿ ರಸ್ತೆಗಳ ಸೇತುವೆಗಳ ಮತ್ತು ಜೆಟ್ಟಿಗಳ ನಿರ್ಮಾಣ ನಬಾರ್ಡ್ ಸಹಾಯ**

ಈ ಲೆಕ್ಕ ಶೀರ್ಷಿಕೆಯಡಿ ನಬಾರ್ಡ್ ನೆರವಿನೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿ ಮೀನುಗಾರಿಕೆ ರಸ್ತೆ, ಸೇತುವೆ ಮತ್ತು ಜೆಟ್ಟಿಗಳ ನಿರ್ಮಾಣ, ಶುಚಿಯಾದ ಮೀನು ಮಾರುಕಟ್ಟೆಗಳ ನಿರ್ಮಾಣ, ಮೀನುಮರಿ ಉತ್ಪಾದನಾ ಕೇಂದ್ರಗಳ ಅಧುನೀಕರಣ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈಗಾಗಲೇ ಮಂಜೂರಾದ ಕಾಮಗಾರಿಗಳನ್ನು ಪ್ರಾರಂಭಿಸಲು/ ಮುಂದುವರಿಸಲು ಅನುದಾನ ಒದಗಿಸಲಾಗಿದೆ.

**12. -"ವಿದ್ಯಾನಿಧಿ" ಯೋಜನೆ**

ಕರ್ನಾಟಕ ರಾಜ್ಯದಲ್ಲಿ ಸುಮಾರು 10 ಲಕ್ಷ ಮೀನುಗಾರರಿದ್ದು, ಮೀನುಗಾರರು ಆರ್ಥಿಕವಾಗಿ ಹಿಂದುಳಿದವರಾಗಿರುತ್ತಾರೆ. ರೈತರ ಮಕ್ಕಳ ಹೆಚ್ಚಿನ ಹಾಗೂ ಉನ್ನತ ಶಿಕ್ಷಣ ಪ್ರೋತ್ಸಾಹಿಸಲು ಶಿಷ್ಯವೇತನ (Scholarship) ಯೋಜನೆ-"ವಿದ್ಯಾನಿಧಿ" ಯೋಜನೆಯನ್ನು ಅನುಷ್ಠಾನಗೊಳಿಸ ಲಾಗುತ್ತಿದೆ.

**ಜಿಲ್ಲಾ ಪಂಚಾಯತ್ ಯೋಜನೆಗಳು**

1.**ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ**

ಈ ಯೋಜನೆಯಡಿ ಜೌಗು ಹಾಗೂ ಚೌಳು ಪ್ರದೇಶಗಳಲ್ಲಿ ಒಂದು ಹೆಕ್ಟೇರ್ ಮೀನು ಕೃಷಿಕೊಳ ನಿರ್ಮಿಸಲು ಪ್ರತಿ ಎಕರೆ ಮೀನು ಕೃಷಿಕೊಳ ನಿರ್ಮಾಣ ಮಾಡಲು ಘಟಕ ವೆಚ್ಚದ ಶೇಕಡ 40 ರಷ್ಟು ಅಂದರೆ ಗರಿಷ್ಠ ರೂ.4,80,000/- ಸಹಾಯಧನವಾಗಿ ನೀಡಲಾಗುತ್ತದೆ. ಒಂದು ಹೆಕ್ಟೇರ್ ಸ್ವಂತ ಜಮೀನಿನಲ್ಲಿ ಮೀನುಕೃಷಿ ಕೊಳವನ್ನು ನಿರ್ಮಾಣ ಮಾಡಿ ಮೀನುಗಾರಿಕೆಯನ್ನು ತೆಗೆದುಕೊಳ್ಳಲು ಖಾಸಗಿ ವ್ಯಕ್ತಿಗಳಿಗೆ ಘಟಕ ವೆಚ್ಚದ ಶೇಕಡ 40 ರಷ್ಟು ಅಂದರೆ ಗರಿಷ್ಠ ರೂ.4,40,000/- ಸಹಾಯಧನವಾಗಿ ನೀಡಲಾಗುತ್ತದೆ. ಅಲ್ಲದೆ, ಹುಲ್ಲುಗೆಂಡೆ ಮೀನುಮರಿ ಗಳನ್ನು ಕೆರೆಗಳಲ್ಲಿ ಬಿತ್ತನೆ ಮಾಡಿದ ಕೃಷಿಕರಿಗೆ ಶೇಕಡ 50 ರಷ್ಟು ಗರಿಷ್ಠ ರೂ.10,000/- ಗಳಿಗೆ ಮೀರದಂತೆ ಸಹಾಯಧನವನ್ನು ನೀಡಲಾಗುವುದು ಹಾಗೂ ಬಾವಿ ಮತ್ತು ನೀರಾವರಿ ಹೊಂಡಗಳಲ್ಲಿ ಮೀನು ಕೃಷಿಗಾಗಿ 500 ಸಾಮಾನ್ಯ ಗೆಂಡೆ ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಿ ಮೀನುಕೃಷಿಯನ್ನು ಪ್ರೋತ್ಸಾಹಿಸಲಾಗುವುದು.

ಈ ಯೋಜನೆಯಡಿ ಅನುದಾನವನ್ನು ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ, ಫಾರಂಗಳಲ್ಲಿ, ಕೇಜ್ ಮತ್ತು ಪೆನ್‌ಗಳಲ್ಲಿ ಮೀನುಮರಿ ಪಾಲನೆಗೆ, ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನುಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ಖರೀದಿ, ನಿರ್ವಹಣೆ ಮತ್ತು ಇತರ ಸಲಕರಣೆಗಳ ಖರೀದಿಗೆ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ.

**2. ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನುಮಾರಾಟಕ್ಕೆ ಸಹಾಯ**

ಮೀನುಗಾರರು ಮೀನನ್ನು ತಾಜಾ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ಖರೀದಿಸಲು ಪ್ರತಿಶತ 50ರ ನೆರವಿನೊಂದಿಗೆ ಗರಿಷ್ಠ ರೂ.4,000/- ಸಹಾಯಧನವನ್ನು ಹಾಗೂ ದ್ವಿಚಕ್ರವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.30000/-ಗಳ ಸಹಾಯಧನವನ್ನು ನೀಡಲಾಗುವುದು.

ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತ ಸಾಗಾಣಿಕೆಗಾಗಿ ಮೀನುಗಾರರಿಗೆ ವಾಹನವನ್ನು ಖರೀದಿಸಲು ಆರ್ಥಿಕ ನೆರವನ್ನು ನೀಡುವ ಉದ್ದೇಶದಿಂದ "ಮತ್ಸ್ಯವಾಹಿನಿ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ತ್ರಿಚಕ್ರ ಟೆಂಪೋರಿಕ್ಷಾವನ್ನು ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.1,20,000 ಗಳ ಸಹಾಯಧನವನ್ನು ಹಾಗೂ ನಾಲ್ಕು ಚಕ್ರದ ವಾಹನ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.2,40,000/- ಗಳ ಸಹಾಯಧನವನ್ನು ನೀಡಲಾಗುವುದು.

ಇದಲ್ಲದೆ ಸದರಿ ಯೋಜನೆಯಡಿ ಯಾಂತ್ರೀಕೃತವಲ್ಲದ (ಪಾತಿ) ದೋಣಿಹೊಂದಿರುವ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಗರಿಷ್ಠ ರೂ.10000/- ಗಳ ಘಟಕ ವೆಚ್ಚದಲ್ಲಿ ಖರೀದಿಸಲು ಮತ್ತು ಪ್ರತಿಶತ 50 ರಷ್ಟು ಅಂದರೆ ಗರಿಷ್ಠ ರೂ.5000/- ಗಳನ್ನು ಸಹಾಯಧನವಾಗಿ ನೀಡಲು ಅವಕಾಶ ಕಲ್ಪಿಸಲಾಗಿದೆ.

**3. ಪ್ರದರ್ಶನ ಮತ್ತು ತರಬೇತಿ**

ಮೀನು ಕೃಷಿಯ ಹಿತದೃಷ್ಟಿಯಿಂದ ಸಾರ್ವಜನಿಕರ ಮಾಹಿತಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಪ್ರದರ್ಶಿಸಲಾಗುವುದು. ಹಾಗೂ ಆಸಕ್ತಿ ಹೊಂದಿದ ಕೃಷಿಕರಿಗೆ ಮೀನುಕೃಷಿಯ ಬಗ್ಗೆ ತರಬೇತಿ ನೀಡುವುದು, ಮತ್ಸ್ಯಪಾಲನೆ ಮತ್ತು ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುವುದು.

ಮೀನುಗಾರಿಕೆ ನಿರ್ದೇಶಕರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಬಲ್ಕೀಶ್‌ಬಾನು (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 474(...)ಕ್ಕೆ

## ಅನುಬಂಧ - 3

## ಕಳೆದ ಮೂರು ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯ ಮೀನುಗಾರರಿಗೆ ನೀಡಿದ ಸೌಲಭ್ಯಗಳಾವುವು: (ತಾಲ್ಲೂಕುವಾರು ವಿವರ ನೀಡುವುದು)

### ಜಿಲ್ಲಾ ವಲಯ ಸೌಲಭ್ಯಗಳು

**ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ :-** ಸಾಮಾನ್ಯ ವರ್ಗದ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯ ಫಲಾನುಭವಿಗಳಿಗೆ ರೂ. 10,000/- ಮೊತ್ತದ ಉಚಿತ ಸಲಕರಣೆ ಕಿಟ್/ಫೈಬರ್ ಗ್ಲಾಸ್ ಹರಿಗೋಲು ವಿತರಣೆ ಮಾಡಲಾಗುತ್ತದೆ.

| ಕ್ರ. ಸಂ. | ತಾಲ್ಲೂಕು | ಸಲಕರಣೆ ಕಿಟ್/ಫೈಬರ್‌ಗ್ಲಾಸ್ ಹರಿಗೋಲು ಸಹಾಯಧನ | | | | | |
|---|---|---|---|---|---|---|---|
| | | 2022-23 | | 2023-24 | | 2024-25 | |
| | | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) |
| 1 | ಶಿವಮೊಗ್ಗ | 2.5982 | 26 | 4.2000 | 42 | 5.20 | 52 |
| 2 | ಸಾಗರ ಮತ್ತು ಹೊಸನಗರ | 3.7 | 37 | 4.200 | 42 | 4.60 | 46 |
| 3 | ಶಿಕಾರಿಪುರ | 2.7994 | 28 | 3.9990 | 40 | 3.60 | 36 |
| 4 | ಭದ್ರಾವತಿ | 2.60 | 26 | 3.0989 | 31 | 3.20 | 32 |
| 5 | ಸೊರಬ | 3.00 | 30 | 3.10 | 31 | 3.60 | 36 |
| 6 | ತೀರ್ಥಹಳ್ಳಿ | 1.8 | 18 | 2.40 | 24 | 2.70 | 27 |
| | **ಒಟ್ಟು** | **16.4976** | **165** | **20.98885** | **210** | **22.9000** | **229** |

**ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯ:-**ಮೀನು ಮಾರಾಟ ಕೈಗೊಳ್ಳಲು ಮೀನುಗಾರರಿಗೆ ಫಲಾನುಭವಿಗಳಿಗೆ ಖರೀದಿಗೆ ತಲಾ ರೂ. 75000 ಘಟಕ ವೆಚ್ಚದಲ್ಲಿ ಶೇ. 40 ರಷ್ಟು ಅಥವಾ ಗರಿಷ್ಠ ರೂ. 30000 ಸಹಾಯಧನ ವಿತರಣೆ ಮಾಡಲಾಗುತ್ತದೆ.

| ಕ್ರ. ಸಂ. | ತಾಲ್ಲೂಕು | ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯ | | | | | |
|---|---|---|---|---|---|---|---|
| | | 2022-23 | | 2023-24 | | 2024-25 | |
| | | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) |
| 1 | ಶಿವಮೊಗ್ಗ | 0.5152 | 2 | 2.51053 | 9 | 2.4997 | 9 |
| 2 | ಸಾಗರ ಮತ್ತು ಹೊಸನಗರ | 2.0152 | 7 | 2.09735 | 7 | 2.3036 | 8 |
| 3 | ಶಿಕಾರಿಪುರ | 1.2000 | 4 | 0.89056 | 3 | 1.50 | 5 |
| 4 | ಭದ್ರಾವತಿ | 1.09924 | 4 | 1.20 | 4 | 1.50 | 5 |
| 5 | ಸೊರಬ | 0.82817 | 3 | 0.80156 | 3 | 1.122 | 4 |
| 6 | ತೀರ್ಥಹಳ್ಳಿ | 1.2000 | 4 | 1.50 | 5 | 1.20 | 4 |
| | **ಒಟ್ಟು** | **6.85781** | **24** | **9.00** | **31** | **10.1253** | **35** |

## ರಾಜ್ಯ ವಲಯ ಸೌಲಭ್ಯಗಳು

### ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ :-

| ಕ್ರ. ಸಂ. | ತಾಲ್ಲೂಕು | ಸಲಕರಣೆ ಕಿಟ್/ಫೈಬರ್‌ಗ್ಲಾಸ್ ಹರಿಗೋಲು ಸಹಾಯಧನ | | | | | |
|---|---|---|---|---|---|---|---|
| | | 2022-23 | | 2023-24 | | 2024-25 | |
| | | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) |
| 1 | ಶಿವಮೊಗ್ಗ | 0.79980 | 8 | 1.80 | 18 | 1.00 | 10 |
| 2 | ಸಾಗರ ಮತ್ತು ಹೊಸನಗರ | 1.10 | 11 | 1.50 | 15 | 1.60 | 16 |
| 3 | ಶಿಕಾರಿಪುರ | 2.1978 | 22 | 1.20 | 12 | 1.00 | 10 |
| 4 | ಭದ್ರಾವತಿ | 0.40 | 4 | 1.90 | 19 | 0.80 | 8 |
| 5 | ಸೊರಬ | 0.70 | 7 | 1.50 | 15 | 0.80 | 8 |
| 6 | ತೀರ್ಥಹಳ್ಳಿ | 1.40 | 14 | 0.60 | 6 | 0.80 | 8 |
| | **ಒಟ್ಟು** | **6.60** | **66** | **8.50** | **85** | **6.00** | **60** |

### ಮೀನುಮರಿ ಖರೀದಿಗೆ ಸಹಾಯ:-

| ಕ್ರ. ಸಂ. | ತಾಲ್ಲೂಕು | ಮೀನುಮರಿ ಖರೀದಿಗೆ ಸಹಾಯ | | | | | |
|---|---|---|---|---|---|---|---|
| | | 2022-23 | | 2023-24 | | 2024-25 | |
| | | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) |
| 1 | ಶಿವಮೊಗ್ಗ | 11.97621 | 199 | 9.75789 | 184 | 12.37792 | 199 |
| 2 | ಶಿಕಾರಿಪುರ | 1.10497 | 20 | 1.44296 | 38 | 0.91750 | 15 |
| 3 | ಭದ್ರಾವತಿ | 9.97963 | 143 | 8.13918 | 136 | 9.7233 | 151 |
| | **ಒಟ್ಟು** | **23.06081** | **362** | **19.34003** | **358** | **23.01872** | **365** |

### ಕೆರೆ/ಜಲಾಶಯ ಅಂಚಿನಲ್ಲಿ ಮೀನುಮರಿ ಪಾಲನಾ ಕೊಳಗಳಲ್ಲಿ ಮೀನುಮರಿ ಪಾಲನೆಗೆ ಸಹಾಯ:-

| ಕ್ರ. ಸಂ. | ತಾಲ್ಲೂಕು | ಮೀನುಮರಿ ಪಾಲನೆಗೆ ಸಹಾಯ | | | | | |
|---|---|---|---|---|---|---|---|
| | | 2022-23 | | 2023-24 | | 2024-25 | |
| | | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಹೆ.ಗಳಲ್ಲಿ) | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಹೆ.ಗಳಲ್ಲಿ) | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಹೆ.ಗಳಲ್ಲಿ) |
| 1 | ಶಿವಮೊಗ್ಗ | 0.17665 | 1.00 ಹೆ. | - | - | - | - |
| 2 | ಶಿಕಾರಿಪುರ | 2.81835 | 6.00 ಹೆ. | - | - | - | - |
| 3 | ಭದ್ರಾವತಿ | 0.36350 | 1.00 ಹೆ. | - | - | - | - |
| 4 | ತೀರ್ಥಹಳ್ಳಿ | 1.2498 | 1.00 ಹೆ. | - | - | - | - |
| 5 | ಸಾಗರ | - | - | - | - | 1.00 | 0.50 ಹೆ. |
| | **ಒಟ್ಟು** | **4.6083** | **9.00 ಹೆ.** | - | - | **1.00** | **0.50 ಹೆ.** |

ಮೀನುಗಾರಿಕೆ ಚಟುವಟಿಕೆ ಕೈಗೊಳ್ಳಲು ವಾಣಿಜ್ಯ ಹಾಗೂ ಪ್ರಾದೇಶಿಕ ಬ್ಯಾಂಕುಗಳಿಂದ ಪಡೆದ ಸಾಲದ ಮೊತ್ತಕ್ಕೆ ಬಡ್ಡಿ ಸಹಾಯ:-

| ಕ್ರ. ಸಂ. | ತಾಲ್ಲೂಕು | ಬಡ್ಡಿ ಸಹಾಯಧನದ ವಿವರ | | | | | |
|---|---|---|---|---|---|---|---|
| | | 2022-23 | | 2023-24 | | 2024-25 | |
| | | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) |
| 1 | ಶಿವಮೊಗ್ಗ | - | - | | | 0.15340 | 7 |
| 2 | ಸಾಗರ | - | - | | | 0.09545 | 3 |
| 3 | ಭದ್ರಾವತಿ | - | - | 8.40471 | 124 | - | - |
| | **ಒಟ್ಟು** | - | - | **8.40471** | **124** | **0.24885** | **10** |

## ಕೇಂದ್ರ ವಲಯ ಸೌಲಭ್ಯಗಳು

**ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಸಹಾಯಧನ :-**

| ಕ್ರ. ಸಂ. | ತಾಲ್ಲೂಕು | ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಸಹಾಯಧನ ನೀಡಿರುವ ವಿವರ (PMMSY) | | | | | |
|---|---|---|---|---|---|---|---|
| | | 2022-23 | | 2023-24 | | 2024-25 | |
| | | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) |
| 1 | ಶಿವಮೊಗ್ಗ | 25.43017 | 26 | 23.0510 | 30 | 7.32484 | 10 |
| 2 | ಸಾಗರ ಮತ್ತು ಹೊಸನಗರ | 4.4568 | 7 | 8.7499 | 3 | 14.6238 | 4 |
| 3 | ಶಿಕಾರಿಪುರ | 5.2590 | 7 | 8.9100 | 9 | 12.95976 | 8 |
| 4 | ಭದ್ರಾವತಿ | 10.7920 | 11 | 15.1018 | 13 | 1.47952 | 3 |
| 5 | ಸೊರಬ | - | - | 1.6550 | 1 | 10.69200 | 4 |
| 6 | ತೀರ್ಥಹಳ್ಳಿ | 12.4410 | 2 | 26.8012 | 6 | 3.09478 | 7 |
| | **ಒಟ್ಟು** | **58.37847** | **53** | **84.26885** | **62** | **50.17470** | **36** |

ಮೀನುಗಾರಿಕೆ ನಿರ್ದೇಶಕರು

6/8

ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 427 (279)ಕ್ಕೆ

## ಅನುಬಂಧ- 4

### ಶಿವಮೊಗ್ಗ ಜಿಲ್ಲೆಯಲ್ಲಿ ನೋಂದಣಿಯಾದ ಮೀನುಗಾರರ ಮತ್ತು ನೋಂದಣಿಯಾಗದೇ ಇರುವ ಮೀನುಗಾರರ ಸಂಖ್ಯೆ ತಾಲ್ಲೂಕುವಾರು ವಿವರ

| ಕ್ರ ಸಂ | ಜಿಲ್ಲೆ | ತಾಲ್ಲೂಕು | ನೋಂದಣಿಯಾದ ಮೀನುಗಾರರ ಸಂಖ್ಯೆ | ನೋಂದಣಿಯಾಗದೇ ಇರುವ ಮೀನುಗಾರರ ಸಂಖ್ಯೆ |
|---|---|---|---|---|
| 1 | ಶಿವಮೊಗ್ಗ | ಭದ್ರಾವತಿ | 1250 | 500 |
| 2 | ಶಿವಮೊಗ್ಗ | ಸಾಗರ ಮತ್ತು ಹೊಸನಗರ | 608 | 8972 |
| 3 | ಶಿವಮೊಗ್ಗ | ಶಿಕಾರಿಪುರ | 1100 | 2620 |
| 4 | ಶಿವಮೊಗ್ಗ | ಶಿವಮೊಗ್ಗ | 2638 | 157 |
| 5 | ಶಿವಮೊಗ್ಗ | ಸೊರಬ | 285 | 4215 |
| 6 | ಶಿವಮೊಗ್ಗ | ತೀರ್ಥಹಳ್ಳಿ | 929 | 119 |
| | | ಒಟ್ಟು | **6810** | **16583** |

ಮೀನುಗಾರಿಕೆ ನಿರ್ದೇಶಕರು

ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 427(279)ಕ್ಕೆ

## ಅನುಬಂಧ- 5

### ಶಿವಮೊಗ್ಗ ಜಿಲ್ಲೆಯ ಮೀನುಗಾರರ ಸಹಕಾರ ಸಂಘಗಳ ತಾಲ್ಲೂಕುವಾರು ವಿವರ

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಸಂಘದ ಹೆಸರು | ಸಂಘದ ನೋಂದಣಿ ಸಂಖ್ಯೆ ಮತ್ತು ದಿನಾಂಕ |
|---|---|---|---|---|
| 1 | ಶಿವಮೊಗ್ಗ | ಶಿಕಾರಿಪುರ | ಕುಮದ್ವತಿ ಮೀನುಗಾರರ ಸಹಕಾರ ಸಂಘ (ರಿ) ಶಿಕಾರಿಪುರ ತಾಲ್ಲೂಕು | B1/ARSR/RCS/3121/74-75 ದಿನಾಂಕ: 3/15/1975 |
| 2 | ಶಿವಮೊಗ್ಗ | ಶಿಕಾರಿಪುರ | ಶ್ರೀ ದುರ್ಗ ದೇವಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮಹಿಳಾ ಮೀನುಗಾರರ ಸಹಕಾರ ಸಂಘ ನಿಯಮಿತ ಕವಾಸಪುರ, ಶಿಕಾರಿಪುರ ತಾಲ್ಲೂಕು | CR-04 /55931/22-23 ದಿನಾಂಕ: 8/6/2023 |
| 3 | ಶಿವಮೊಗ್ಗ | ಶಿವಮೊಗ್ಗ | ಮೀನುಗಾರರ ಸಹಕಾರ ಸಂಘ., ಗೊಂದಿಚಟ್ನಳ್ಳಿ ಶಿವಮೊಗ್ಗ | ವಿಆರ್.ಎಸ್.807/62-63 ದಿನಾಂಕ: 4/8/1962 |
| 4 | ಶಿವಮೊಗ್ಗ | ಶಿವಮೊಗ್ಗ | ಮಹಿಳಾ ಮೀನುಗಾರರ ಸಹಕಾರ ಸಂಘ ನಿ., ಹೆಚ್ ಹೆಚ್ ರಸ್ತೆ, ಗುರುಪುರ ಶಿವಮೊಗ್ಗ | ಎಆರ್24/ನೋಂದಣಿ/ಸಿಆರ್141/30080/2009-10 ದಿನಾಂಕ: 27/01/2010 |
| 5 | ಶಿವಮೊಗ್ಗ | ಶಿವಮೊಗ್ಗ | ಜಿಲ್ಲಾ ಮೀನುಗಾರರ ಸಹಕಾರ ಸಂಘ., ಮಾಣಿಕ್ಯಂ ಬಿಲ್ಡಿಂಗ್, ನೆಹರು ರಸ್ತೆ ಶಿವಮೊಗ್ಗ | ಜೆಆರ್ಬಿ.ಆರ್ಜಿಎನ್:41/36963/08-09 ದಿನಾಂಕ: 17/10/2009 |
| 6 | ಶಿವಮೊಗ್ಗ | ಶಿವಮೊಗ್ಗ | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ತುಂಗಾ ಮಹಿಳಾ ಮೀನುಗಾರರ ಸಹಕಾರ ಸಂಘ., ರಾಜೀವಗಾಂಧಿ ಬಡಾವಣೆವಿದ್ಯಾನಗರ ಶಿವಮೊಗ್ಗ | ಎಆರ್24/ನೋಂದಣಿ/ಸಿಆರ್/1408/2018-19 ದಿನಾಂಕ: 15/02/2019 |
| 7 | ಶಿವಮೊಗ್ಗ | ಶಿವಮೊಗ್ಗ | ಪರಿಶಿಷ್ಟ ಪಂಗಡದ ವಾಲ್ಮೀಕಿ ಮೀನುಗಾರರ ಸಹಕಾರ ಸಂಘ ನಿ., ಆಯನೂರು ಕೋಹಳ್ಳಿ ಶಿವಮೊಗ್ಗ ತಾಲ್ಲೂಕು | ಎಆರ್24/ನೋಂದಣಿ/ಸಿಆರ್/04/49253/2020-21/931 ದಿನಾಂಕ: 15/02/2021 |
| 8 | ಶಿವಮೊಗ್ಗ | ಶಿವಮೊಗ್ಗ | ಪರಿಶಿಷ್ಟ ಜಾತಿ (ಎಸ್ ಸಿ ) ಮೀನುಗಾರರ ಸಹಕಾರ ಸಂಘ ನಿ., ಗೊಂದಿಚಟ್ನಳ್ಳಿ ಶಿವಮೊಗ್ಗ ತಾಲ್ಲೂಕು | ಎಆರ್24/ನೋಂದಣಿ/ಸಿಆರ್/02/49251/2020-21/673(ಎ)ದಿನಾಂಕ: 27/01/2021 |
| 9 | ಶಿವಮೊಗ್ಗ | ಶಿವಮೊಗ್ಗ | ಚೌಡೇಶ್ವರಿ ಮೀನುಗಾರರ ಸಹಕಾರ ಸಂಘ ನಿ., ಜನರಲ್ ಹಾಸ್ಟೆಲ್ ಹಿಂಭಾಗ ಬಿ.ಹೆಚ್ ರಸ್ತೆ ವಿದ್ಯಾನಗರ ಶಿವಮೊಗ್ಗ | ಎಆರ್24/ನೋಂದಣಿ/ಸಿಆರ್/03/49252/2020-21/802 ದಿನಾಂಕ :3/2/2021 |
| 10 | ಶಿವಮೊಗ್ಗ | ಶಿವಮೊಗ್ಗ | ಗಂಗಾ ಪರಮೇಶ್ವರಿ ಮೀನುಗಾರರ ಸಹಕಾರ ಸಂಘ ನಿ., ಗಾಜನೂರು ಅಗ್ರಹಾರ ಶಿವಮೊಗ್ಗ | ಎಆರ್24/ನೋಂದಣಿ/ಸಿಆರ್/06/49261/2021-22/23 ದಿನಾಂಕ: 13/04/2022 |
| 11 | ಶಿವಮೊಗ್ಗ | ಶಿವಮೊಗ್ಗ | ಶಿವಮೊಗ್ಗ ಮಹಾನಗರ ಪಾಲಿಕೆ ಮೀನು ಮಾರಾಟಗಾರರ ಸಹಕಾರ ಸಂಘ ನಿ., ಲಷ್ಕರ್ ಮೊಹಲ್ಲ ಶಿವಮೊಗ್ಗ | ಎಆರ್24/ನೋಂದಣಿ/ಸಿಆರ್/09/49264/2021/346 ದಿನಾಂಕ: 22/07/2022 |
| 12 | ಶಿವಮೊಗ್ಗ | ಶಿವಮೊಗ್ಗ | ಮಹಾಲಕ್ಷ್ಮೀ ಮೀನುಗಾರರ ಸಹಕಾರ ಸಂಘ ನಿ., ಗಣಪತಿ ದೇವಸ್ಥಾನ ಹತ್ತಿರ, ರಾಮಣ್ಣ ಶೆಟ್ಟಿ ಪಾರ್ಕ್ ಶಿವಮೊಗ್ಗ | ಎಆರ್24/ನೋಂದಣಿ/ಸಿಆರ್53/49266/2021-22/1049 ದಿನಾಂಕ: 19/12/2022 |
| 13 | ಶಿವಮೊಗ್ಗ | ಶಿವಮೊಗ್ಗ | ಯಲ್ಲಮ್ಮದೇವಿ ಮೀನುಗಾರರ ಸಹಕಾರ ಸಂಘ , 2ನೇ ತಿರುವು, ಬಿಗ್ಗುಡಿ ಶಿವಮೊಗ್ಗ ತಾ. | ಎಆರ್24/ನೋಂದಣಿ/ಸಿಆರ್149/49274/2022-23/195 ದಿನಾಂಕ: 29/06/2024 |
| 14 | ಶಿವಮೊಗ್ಗ | ಶಿವಮೊಗ್ಗ | ಶ್ರೀ ಚಾಮುಂಡೇಶ್ವರಿ ಪರಿಶಿಷ್ಟ ಜಾತಿ ಮೀನುಗಾರರ ಸಹಕಾರ ಸಂಘ ನಿ., ಚೋರಡಿ | ಎಆರ್24/ನೋಂದಣಿ/ಸಿಆರ್-12/49278/2024-25/927 ದಿನಾಂಕ: 07/03/2025 |
| 15 | ಶಿವಮೊಗ್ಗ | ಭದ್ರಾವತಿ | ತುಂಗಭದ್ರಾ ಗ್ರಾಮೀಣ ಮೀನುಗಾರರ ಸಹಕಾರ ಸಂಘ ಹೊಳೆಹೊನ್ನೂರು ಭದ್ರಾವತಿ, ಶಿವಮೊಗ್ಗ ಜಿಲ್ಲೆ(ಮಾರಶೆಟ್ಟಿಹಳ್ಳಿ) | AR24/REG:RJS084/28661:2000-01 ದಿನಾಂಕ: 30-10-2000 |
| 16 | ಶಿವಮೊಗ್ಗ | ಭದ್ರಾವತಿ | ಭದ್ರಾ ಮೀನುಗಾರರ ಸಹಕಾರ ಸಂಘ, ನಿಯಮಿತ ಭದ್ರಾವತಿ, ಶಿವಮೊಗ್ಗ ಜಿಲ್ಲೆ | AR24/REG:CR3585/1975-76 ದಿನಾಂಕ: 11/6/1975 |

| | | | | |
|---|---|---|---|---|
| 17 | ಶಿವಮೊಗ್ಗ | ಸಾಗರ | ತಾಲ್ಲೂಕು ಮೀನುಗಾರರ ಸಹಕಾರ ಸಂಘ, ನಿಯಮಿತ., ಸಾಗರ | ARSR/RSR/1/47/27/79-80 ದಿನಾಂಕ: 4/10/1979 |
| 18 | ಶಿವಮೊಗ್ಗ | ತೀರ್ಥಹಳ್ಳಿ | ತುಂಗಾ ಮೀನುಗಾರರ ಸಂಘ ನಲ್ಲಿಸರಕ್ಯಾಂಪ್ ಮಂಡಗದ್ದೆ ಪೋಸ್ಟ್ ತೀರ್ಥಹಳ್ಳಿ ತಾ\|\|, | DRS/32499/CR13/2004-05 ದಿನಾಂಕ: 12/22/2004 |
| 19 | ಶಿವಮೊಗ್ಗ | ತೀರ್ಥಹಳ್ಳಿ | ಕುಶಾವತಿ ಪರಿಶಿಷ್ಟ ಪಂಗಡ ಮೀನುಗಾರರ ಸಂಘ, ಸೀಬಿನಕೆರೆ ತೀರ್ಥಹಳ್ಳಿ ತಾ\|\|, | ರಿನಂ:DRS/32499/CR13/2004-05 ದಿನಾಂಕ:1/20/2022 |
| 20 | ಶಿವಮೊಗ್ಗ | ಸೊರಬ | ಕುಬಟೂರು ದೊಡ್ಡಕೆರೆ ಮೀನುಗಾರರ ಸಹಕಾರ ಸಂಘ(ಆರ್) ಕುಬಟೂರು | CR-05/55438/2023-23 ದಿನಾಂಕ: 02-01-2024 |
| 21 | ಶಿವಮೊಗ್ಗ | ಸೊರಬ | ಶ್ರೀ ದಂಡಾವತಿ ಮೀನುಗಾರಿಕಾ ಸಹಕಾರ ಸಂಘ ಲಿಮಿಟೆಡ್ ಕಸಿಮಾವಿನಕೊಪ್ಪಲು, ಸೊರಬ ತಾಲ್ಲೂಕು | CR-08 /55945/2024-25 ದಿನಾಂಕ: 04-10-2024 |

ಮೀನುಗಾರಿಕೆ ನಿರ್ದೇಶಕರು